

ಅಬ್ಬಿ ಜಲಪಾತ

## ಕ್ಲಬ್ ಮಹೀಂದ್ರ ಆತಿಥ್ಯ



ಮಡಿಕೇರಿಯ ಹೊರವಲಯದಲ್ಲಿ ಗುಡ್ಡ ಬೆಟ್ಟಗಳ ಮಧ್ಯೆ ಇರುವ ಕ್ಲಬ್ ಮಹೇಂದ್ರ ರೆಸಾರ್ಟ್ ಪ್ರವಾಸಿಗರ ಅತ್ಯಂತ ಜನಪ್ರಿಯ ತಾಣ. ಕೊಡಗಿನ ವಿಶಿಷ್ಟ ಅಡುಗೆ ಮಾತ್ರವಲ್ಲ, ಜಗತ್ತಿನ ಎಲ್ಲ ದೇಶಗಳ ಅಡುಗೆ ರುಚಿಯೂ ಇಲ್ಲಿ ಸಿಗುತ್ತದೆ. 'ಆದರೆ ಬಂದವರೆಲ್ಲ ಹೆಚ್ಚಾಗಿ ಕೊಡಗಿನ ಅಡುಗೆ ರುಚಿಯನ್ನೇ ಸವಿಯುವುದು' ಎನ್ನುತ್ತಾರೆ ಇಲ್ಲಿನ ಎಕ್ಸಿಕ್ಯೂಟಿವ್ ಚೆಫ್– ದೇಬ್ರಾಜ್ ಭಾಯುಮಿಕ್.



ಕ್ಲಬ್ ಮಹೀಂದ್ರ ಎಲ್ಲ ವರ್ಗದ ಪ್ರವಾಸಿಗರಿಗೂ ಅನುಕೂಲವಾಗುವ ನಾಲ್ಕು ಬಣ್ಣಗಳ ಸದಸ್ಯತ್ವ ಕಾರ್ಡ್ ಹೊಂದಿದೆ. ಸದಸ್ಯತ್ವಕ್ಕೆ ರೂ. 2.7 ಲಕ್ಷದಿಂದ 18 ಲಕ್ಷದವರೆಗೆ ವಿವಿಧ ವರ್ಗಗಳಿವೆ. ವೀರಾಜಪೇಟೆಯಲ್ಲೂ ಒಂದು ರೆಸಾರ್ಟ್ ಹೊಂದಿದೆ.

ಮಡಿಕೇರಿಯ ರೆಸಾರ್ಟ್ 33 ಎಕರೆ ಭೂ ಪ್ರದೇಶದಲ್ಲಿ ವಿಸ್ತರಿಸಿದ್ದು, ಶೇ.80ರಷ್ಟು ಗಿಡ ಮರಗಳಿಂದ ಆವೃತ್ತವಾಗಿದೆ. ಕಾಫಿ ಸಹಿತ ವಿವಿಧ ತೋಟಗಾರಿಕೆ ಬೆಳೆಗಳು, ವಿವಿಧ ಜಾತಿಯ ಮರಗಳು ಗಮನ ಸೆಳೆಯುತ್ತವೆ. ಹಸಿರಿನ ಮಧ್ಯೆ ಎಂಟು ಪ್ರದೇಶದಲ್ಲಿ ಒಟ್ಟು 220 ವಸತಿ ಕೋಣೆಗಳಿವೆ. ತಜ್ಞ ತರಬೇತಿದಾರರ ಉಸ್ತುವಾರಿಯಲ್ಲಿ ಸಾಹಸ ಕ್ರೀಡೆ ಮತ್ತು ಜಲಕ್ರೀಡೆ ಇಲ್ಲಿನ ಪ್ರಮುಖ ಆಕರ್ಷಣೆ ಎನ್ನುತ್ತಾರೆ– ಇಲ್ಲಿನ ಮುಖ್ಯ ವ್ಯವಸ್ಥಾಪಕ ಸ್ವಪನ್‌ಕುಮಾರ್ ದಾಸ್.

**ಓಂಕಾರೇಶ್ವರ ದೇವಸ್ಥಾನ:** ಮಡಿಕೇರಿಯಲ್ಲಿ ನಗರ ಮಧ್ಯೆಯೇ ಶಿವನ ಪ್ರಾಚೀನ ದೇವಾಲಯವಿದೆ. ಇದನ್ನು 1820ರಲ್ಲಿ ಕಟ್ಟಿಸಲಾಗಿದ್ದು, ಇಲ್ಲಿ ಪ್ರತಿಷ್ಠಾಪಿಸಿರುವ ಶಿವಲಿಂಗವನ್ನು ಕಾಶಿಯಿಂದ ತಂದಿದ್ದಾರೆ ಎನ್ನಲಾಗುತ್ತಿದೆ.

**ಮಡಿಕೇರಿ ಕೋಟೆ:** ಮಡಿಕೇರಿಯ ಮಧ್ಯದಲ್ಲಿ ಜಿಲ್ಲಾಧಿಕಾರಿ ಕಚೇರಿಯ ಆವರಣದಲ್ಲಿ ಕೋಟೆಯೊಂದಿದೆ. ಇದನ್ನು ಲಿಂಗರಾಜೇಂದ್ರ ಒಡೆಯರ್ 19ನೇ ಶತಮಾನದಲ್ಲಿ ಕಟ್ಟಿಸಿದ್ದರು. ಕೋಟೆಯೊಳಗೆ ಸಣ್ಣ ವಸ್ತುಸಂಗ್ರಹಾಲಯವೂ ಇದೆ. ಈ ಕೋಟೆಯ ಮೇಲೇರಿ ನೋಡಿದರೆ ಮಡಿಕೇರಿಯ ರಮಣೀಯ ದೃಶ್ಯ ಕಾಣಿಸುತ್ತದೆ.

**ಅಬ್ಬಿ ಜಲಧಾರೆ:** ಮಡಿಕೇರಿಯಿಂದ ಸುಮಾರು 8 ಕಿ.ಮೀ. ದೂರ. ರಸ್ತೆಯಿಂದ ಅರ್ಧ ಕಿ.ಮೀ ನಡೆದುಕೊಂಡು ಹೋಗಬೇಕು. ಇಕ್ಕೆಲಗಳಲ್ಲಿ ಕಾಫಿ ತೋಟವಿದೆ. ಹಸಿರ ಕಾನನವನ್ನು ಕಣ್ತುಂಬಿ ಹತ್ತು ನಿಮಿಷ ನಡೆದು ಹೋದರೆ ಎದುರಿಗೆ ಬಳುಕುತ್ತಾ ಹರಿದು ಬರುವ ಕಾವೇರಿ! ಆಕೆ ಕಡಿದಾದ ಬೃಹತ್ ಬಂಡೆಗಳ ಮೇಲಿಂದ ಧುಮುಕಿ ಹಾಲ್ನೊರೆಯ ಜಲರಾಶಿ ಸೃಷ್ಟಿಸಿದ್ದಾಳೆ. ಮೆಟ್ಟಿಲುಗಳಲ್ಲಿ ಅಲ್ಲಲ್ಲಿ ನಿಂತು ಕತ್ತು ಕೊಂಕಿಸಿ ಜಲಪಾತವನ್ನು ನೋಡುವ ಗುಂಪು ಮಳೆಗಾಲದಲ್ಲಿ ಸದಾ ಕಾಣಸಿಗುತ್ತದೆ. ಇಲ್ಲಿ ಇನ್ನಷ್ಟು ಸ್ಥಳಾವಕಾಶ ಮಾಡಿ ಕುಳಿತು ನೋಡುವಂತೆ ಮಾಡಲಾಗದೆ?

**ಆನೆಗಳ ದುಬಾರೆ:** ಕುಶಾಲನಗರದ ಬಳಿ ಇರುವ ದುಬಾರೆ ಆನೆಗಳ ಶಿಬಿರ. ಸಿದ್ದಾಪುರ– ಕುಶಾಲನಗರ ಮಾರ್ಗದಲ್ಲಿ ಸಿಗುವ ದುಬಾರೆಯಲ್ಲಿ ಅರಣ್ಯ ಇಲಾಖೆ ಆನೆಗಳ ತರಬೇತಿ ಕೇಂದ್ರವನ್ನು ನಡೆಸುತ್ತಿದೆ. ಪಳಗಿಸಲಾದ ಆನೆಗಳ ಸಹಾಯದಿಂದಲೇ ಕಾಡಾನೆಗಳನ್ನು ಹಿಡಿದು ಇಲ್ಲಿ ತರಬೇತಿ ನೀಡಲಾಗುತ್ತದೆ. ನಿತ್ಯ ಬೆಳಿಗ್ಗೆ ಪ್ರಶಾಂತವಾಗಿ ಹರಿಯುವ ಕಾವೇರಿಯಲ್ಲಿ ನೀರು ಕುಡಿಸಿ ಸ್ನಾನ ಮಾಡಿಸಲು ಆನೆಗಳನ್ನು ಕರೆತರುತ್ತಾರೆ. ಆನೆಗಳ ಆರೈಕೆಯನ್ನು ನೋಡುವುದು ಕಣ್ಣಿಗೆ ಹಬ್ಬ. ಮಕ್ಕಳನ್ನು ಕರೆದುಕೊಂಡು ಬರುವ ಪೋಷಕರ ದೊಡ್ಡ ದಂಡೇ ಇಲ್ಲಿ ಕಾಣಸಿಗುತ್ತದೆ. ಬೆಳಿಗ್ಗೆಯೇ ಆನೆಗಳ ಸ್ನಾನ, ಆಟ ಮತ್ತು ಮೇವು ತಿನ್ನಿಸುವುದನ್ನು ನೋಡಲು ಜನ ಜಾತ್ರೆ. 100 ರೂಪಾಯಿ ಕೊಟ್ಟರೆ ನೀವೂ ನದಿಯಲ್ಲಿ ಇಳಿದು ಸ್ನಾನ ಮಾಡುವ ಆನೆಯ ಮೈ ಉಜ್ಜಬಹುದು.

ಕಾವೇರಿ ನಿಸರ್ಗಧಾಮ, ಬೈಲುಕುಪ್ಪೆಯ ಬೌದ್ಧ ಧರ್ಮೀಯರ ಗೋಲ್ಡನ್ ಟೆಂಪಲ್ (ಟಿಬೆಟನ್ ಕಾಲನಿ) ಮಡಿಕೇರಿಯ ಸುತ್ತ ಇರುವ ಇನ್ನೆರಡು ಆಕರ್ಷಣೆಗಳು. ಮಡಿಕೇರಿಯ ಸುತ್ತಮುತ್ತ ಜೇಬಿಗೆ ಹಗುರ ಎನ್ನಿಸುವ ನೂರಾರು ಹೋಮ್‌ಸ್ಟೇಗಳಿವೆ. ಕೊಡಗಿನ ಹೆಸರುವಾಸಿ ಖಾದ್ಯ ಕಡುಬು, ಅಕ್ಕಿ ರೊಟ್ಟಿ, ಪಂದಿಕರಿಯಂತಹ ಭೋಜನಕ್ಕೆ ಹೆಸರುವಾಸಿ. ಇತ್ತೀಚೆಗೆ ಉತ್ತರ ಭಾರತದಿಂದ ಬರುವವರ ಸಂಖ್ಯೆಯೂ ಹೆಚ್ಚಾಗಿದೆ. ಮೈಸೂರಿನಿಂದ 120 ಕಿ.ಮೀ; ಮಂಗಳೂರಿನಿಂದ 135 ಕಿ.ಮೀ ದೂರ ಇರುವುದರಿಂದ ಕರ್ನಾಟಕದ ಪ್ರವಾಸಿ ಹೆದ್ದಾರಿಯಲ್ಲಿ ಮಡಿಕೇರಿಗೆ ಅತ್ಯಂತ ಪ್ರಮುಖ ಸ್ಥಾನ ಲಭ್ಯವಾಗಿದೆ.

ಕೊಡವ ಭಾಷೆ ದ್ರಾವಿಡ ಭಾಷೆಗಳಲ್ಲಿ ಒಂದು. ಕೊಡಗಿನ ಮೂಲ ಹೆಸರು ಕೊಡೈಮಲೆನಾಡು. ಅಂದರೆ ಕಡಿದಾದ ಬೆಟ್ಟದಲ್ಲಿರುವ ದಟ್ಟ ಅರಣ್ಯ ಎಂದರ್ಥ. ಇಂಗ್ಲಿಷ್‌ನಲ್ಲಿ 'ಕೂರ್ಗ್' ಎಂದೇ ಜನಪ್ರಿಯ. ಹುತ್ತರಿ ಹಬ್ಬ, ಕೈಲ್ ಪೊಲ್ದು ಹಾಗೂ ಕಾವೇರಿ ಸಂಕ್ರಮಣ– ಈ ಹಬ್ಬಗಳ ಸಂದರ್ಭದಲ್ಲಿ ಇಲ್ಲಿ ಜನಸಂದಣಿ ಹೆಚ್ಚು. ಕಾವೇರಿಯ ಉಗಮಸ್ಥಾನ ತಲಕಾವೇರಿಯಲ್ಲಿ ಅದ್ಧೂರಿಯಾಗಿ ಸಂಕ್ರಮಣವನ್ನು ಆಚರಿಸುತ್ತಾರೆ. ಕೊಡವರಿಗೆ ಕಾವೇರಿ ಕೇವಲ ನದಿ ಮಾತ್ರವಲ್ಲ; ಸರ್ವಸ್ವವೂ. ಪುರಾಣಗಳ ಪ್ರಕಾರ ಅಗಸ್ತ್ಯ ಮುನಿಯ ಪತ್ನಿ. ಸದಾ ಮುನಿಯ ಕುಂಡಲದಲ್ಲಿರುವ ಕಾವೇರಿ ಒಂದು ದಿನ ಆಕಸ್ಮಿಕವಾಗಿ ಕಮಂಡಲ ಉರುಳಿ ಹರಿಯಲು ಆರಂಭಿಸುತ್ತಾಳೆ ಎನ್ನುವ ಕಥೆಯಿದೆ. ಮಡಿಕೇರಿಯಿಂದ 30 ಕಿ.ಮೀ. ದೂರದಲ್ಲಿ ಕಾವೇರಿ, ಕನ್ನಿಕಾ ಮತ್ತು ಸುಜ್ಯೋತಿ ನದಿಗಳ ಸಂಗಮವಿದ್ದು ಅದೇ ಭಾಗಮಂಡಲ. ಅಲ್ಲೊಂದು ಸುಂದರ ದೇವಾಲಯವಿದೆ. ಒಟ್ಟಾರೆ ಕೊಡಗು ವರ್ಷದ 12 ತಿಂಗಳೂ ಪ್ರವಾಸಿಗರಿಂದ ಭರ್ತಿಯಾಗಿರುತ್ತದೆ.